ಎಂಬುದನ್ನು ಪೂರ್ಣವಾಗಿ ಪರಿಶೀಲನೆ ಮಾಡಿದ ಮೇಲೆ ಅವರ ಫಲಿತಾಂಶವನ್ನು ಪ್ರಕಟಣೆ ಮಾಡುತ್ತೇವೆ.

ಶಿವಮೊಗ್ಗಕ್ಕೆ ಒಂದು ಕೃಷಿ ಕಾಲೇಜನ್ನು ಮಂಜೂರು ಮಾಡುವುದು.

೧೭೦. ಶ್ರೀ ಕೆ. ಹೆಚ್. ಶ್ರೀನಿವಾಸ (ಶಿವಮೊಗ್ಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕೃಷಿ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ೧೯೮೦–೮೫ನೇ ಸಾಲಿನಲ್ಲಿ ಶಿವಮೊಗ್ಗಕ್ಕೆ ಒಂದು ಕೃಷಿ ಕಾಲೇಜನ್ನು ಮಂಜೂರು ಮಾಡ ಬೇಕೆಂಬ ಬಗ್ಗೆ ಸರ್ಕಾರವು ತೀರ್ಮಾನವನ್ನು ತೆಗೆದುಕೊಂಡಿರುವುದು ನಿಜವಲ್ಲವೆ ?

ಆ) ಹಾಗಾದರೆ ಈ ನಿರ್ಧಾರವನ್ನು ಕಾರ್ಯಗತ ಗೊಳಿಸದಿರಲು ಕಾರಣವೇನು ?

ಇ) ಶಿವಮೊಗ್ಗದಲ್ಲಿ ಕೃಷಿ ಕಾಲೇಜನ್ನು ಸ್ಥಾಪಿಸುವ ಅವಶ್ಯಕತೆ ಹಾಗೂ ಬಹುಕಾಲದ ಬೇಡಿಕೆಯು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಈ) ಹಾಗಾದರೆ ಈ ಕಾಲೇಜನ್ನು ಈಗಿನ ಶೈಕ್ಷಣಿಕ ವರ್ಷದಿಂದ ಶಿವಮೊಗ್ಗದಲ್ಲಿ ಪ್ರಾರಂಭಿಸ ಲಾಗುವುದೆ ?

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಹೌದು.

ಈ) ಇಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಮಂತ್ರಿಗಳ ಉತ್ತರ ಬಹುಶಃ ಟೈಪಿಂಗ್ ಮಿಸ್ಟೇಕ್ ಆಗಿರಬಹುದು. ಇದನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಯೋಗ್ಯವಾಗಿದೆ. ಕಾರಣವೇನೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಬಂಗಾರಪ್ಪನವರು ವ್ಯವಸಾಯ ಸಚಿವರಾಗಿದ್ದಾಗ ರಾಜ್ಯದಲ್ಲಿ ಮೂರು ಕೃಷಿ ಕಾಲೇಜುಗಳನ್ನು ಕೊಡಬೇಕೆಂದು ಹೇಳಿ, ಅದರಲ್ಲಿ, ಶಿವಮೊಗ್ಗದಲ್ಲಿ ಒಂದು, ಮತ್ತೊಂದು ಕೊಡಗು ಜಿಲ್ಲೆಯಲ್ಲಿ, ಮಗದೊಂದು ರಾಯಚೂರು ಜಿಲ್ಲೆಯಲ್ಲಿ, ಕೊಡುತ್ತೇವೆಂದು ಸದನದಲ್ಲಿಯೇ ಘೋಷಣೆ ಮಾಡಿದ್ದಾರೆ, ಅದು ನನ್ನ ತಿಳುವಳಿಕೆಗೆ ಬಂದಿದೆ. ಆ ದೃಷ್ಟಿಯಿಂದ ತಾವು ನನ್ನ ಪ್ರಶ್ನೆಗೆ ಮೊದಲನೆಯದಾಗಿ ಶ್ರೀ ಮಾನ್ ಜೆ. ಎಚ್. ಪಟೇಲ್‌ರವರು ಹಿಂದಿನ ಪ್ರಶ್ನೆಗೆ ಉತ್ತರಿಸಿದ ಹಾಗೆ ಮೊದಲು ಇಲ್ಲ ಎಂದು ಹೇಳಿ ನಂತರ 'ಉದ್ಭವಿಸುವುದಿಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಇದು ಸಮಂಜಸವಾಗಿಲ್ಲ. ಇದನ್ನು ದಯವಿಟ್ಟು ನೋಡಬೇಕು. ಮಂತ್ರಿಗಳು ಬದಲಾವಣೆಯಾಗ ಬಹುದು, ಮಂತ್ರಿಮಂಡಲ ಬದಲಾವಣೆಯಾಗಬಹುದು. ಆದರೆ ಸರ್ಕಾರ ಎನ್ನತಕ್ಕಂತಾಹದ್ದು ಸತತ ವಾಗಿ ನಡೆದುಕೊಂಡು ಹೋಗತಕ್ಕ ವಿಚಾರ. ಆದ್ದರಿಂದ ಮಂತ್ರಿಗಳು ಬದಲಾವಣೆಯಾದ ಮೇಲೆ ಕೆಲವು ಕಡತವನ್ನು ಕೆಲವರು ಒಳಗೆ ಇಟ್ಟು ಬಿಡುತ್ತಾರೆ. ಮತ್ತೊಬ್ಬ ಮಂತ್ರಿಗಳು ಬಂದಾಗ ಅಂತ ಹವುಗಳನ್ನು ಅವರಿಗೆ ತೋರಿಸುವುದೇ ಇಲ್ಲ ಆ ದೃಷ್ಟಿಯಿಂದ ಇದು ತಪ್ಪಾಗಿರಬಹುದು. ಇದನ್ನು ಪುನಃ ಪರಿಶೀಲನೆ ಮಾಡಿ ಉತ್ತರ ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಎಂ. ಪಿ. ಪ್ರಕಾಶ್.—ಪ್ರಾಯಶಃ ಶ್ರೀಮಾನ್ ಶ್ರೀನಿವಾಸ್ ರವರಿಗೆ ತಪ್ಪು ಮಾಹಿತಿ ಸಿಕ್ಕಿದಿಯೇ, ಅಥವಾ ಉದ್ದೇಶ ಪೂರ್ವಕವಾಗಿ ತಪ್ಪು ಮಾಹಿತಿಯನ್ನು ಹೇಳುತ್ತಿದ್ದಾರೋ ಗೊತ್ತಿಲ್ಲ. ಹಿಂದಿನ ಸರ್ಕಾರದವರೇ ಡಾ. ಜಿ. ವಿ. ಕೆ. ರಾವ್ ರವರ ನೇತೃತ್ವದಲ್ಲಿ ಒಂದು ಅಧ್ಯಯನ ತಂಡವನ್ನು ನೇಮಿಸಿ ಕೃಷಿ ಕಾಲೇಜುಗಳನ್ನು ಸ್ಥಾಪನೆ ಮಾಡತಕ್ಕಂತಹದ್ದರಲ್ಲಿ ಅವರಿಂದ ಯೋಗ್ಯ ಸಲಹೆಗಳನ್ನು ಕೊಡಬೇಕೆಂದು ಕೇಳಿಕೊಂಡಿತು ಆ ಅಧ್ಯಯನ ಸಮಿತಿಯು ರಾಯಚೂರು, ಕಂಠಾಲನಗರ ಹಾಗೂ ಶಿವಮೊಗ್ಗ. ಈ ಮೂರು ಸ್ಥಳಗಳಲ್ಲಿ ಮಾಡಬಹುದೆಂದು ಶಿಫಾರಸ್ಸು ಮಾಡಿದೆ. ಕೃಷಿ ಕಾಲೇಜನ್ನು ಮಾಡಬೇಕಾದರೆ, ಮೂಲಭೂತವಾಗಿ ಕೆಲವು ಸವಲತ್ತುಗಳು ಬೇಕಾಗುತ್ತದೆ. ಅವುಗಳೆಲ್ಲವೂ ತತ್‌ಕ್ಷಣ

ರಾಯಚೂರಿನಲ್ಲಿ ದೊರೆತಿದ್ದರಿಂದ ಇಂತಹ ಕೃಷಿ ಕಾಲೇಜುಗಳನ್ನು ಪ್ರಾರಂಭ ಮಾಡಬಹುದು ಎಂದು ಹೇಳಿದ್ದಾರೆ. ಕುಶಾಲನಗರ ಹಾಗೂ ಶಿವಮೊಗ್ಗದಲ್ಲಿ ಇಂತಹ ಪೂರ್ವಭಾವಿಯಾಗಿ ಬೇಕಾದಂತಹ ಸಲವತ್ತುಗಳನ್ನು ಒದಗಿಸಿಕೊಂಡ ಮೇಲೆ ಅಲ್ಲಿ ಕೃಷಿ ಕಾಲೇಜುಗಳನ್ನು ಸ್ಥಾಪನೆ ಮಾಡಬಹುದು ಎಂಬುದಾಗಿ ಶಿಫಾರಸ್ಸು ಮಾಡಿದೆ. ಸರ್ಕಾರದವರು ಯಾವುದೇ ನಿರ್ಣಯಗಳನ್ನು ಈ ಎರಡು ಕಾಲೇಜುಗಳನ್ನು ತೆರೆಯುವ ಬಗ್ಗೆ ತೆಗೆದುಕೊಂಡಿಲ್ಲ. ಪ್ರಾಯಶಃ ಈ ರೀತಿಯಾಗಿದೆಯೆಂದು ತಿಳಿದು ಮಾನ್ಯ ಸದಸ್ಯರಿಗೆ ಗೊಂದಲವಾಗಿರಬಹುದು.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಮಂತ್ರಿಗಳು ತಿರುಗ ಮರುಗವಾಗಿ ಉತ್ತರ ಹೇಳುತ್ತಿದ್ದಾರೆ. ನಿರ್ಣಯ ಆದ ಮೇಲೆ ಡಾ. ಜಿ. ಎ. ಕೆ. ರಾವ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ, ಅಲ್ಲಿ ಏನೇನು ತಯಾರಿಯಾಗಬೇಕು ? ಏನಿದೆ ? ಏನಿಲ್ಲ ! ಎಂಬುದನ್ನು ಸರ್ಕಾರಕ್ಕೆ ತಿಳಿಸುವುದಕ್ಕಾಗಿ ಸಮಿತಿಯನ್ನು ಮೊದಲು ಮಾಡಿದ್ದು ಹಾಗಾದರೆ ಅವರು ೩ ಸ್ಥಳಗಳನ್ನು ಏಕೆ ತೋರಿಸಿದ್ದಾರೆ ? ಮೂರು ಸ್ಥಳಗಳಲ್ಲಿ ಕಾಲೇಜುಗಳನ್ನು ಮಾಡಬೇಕು ಎಂಬ ಸರ್ಕಾರದ ತೀರ್ಮಾನದ ನಂತರ ಸಮಿತಿ ಅಲ್ಲಿಗೆ ಹೋಗಿ ಬಂದದ್ದು. ಅವರು ಮಾಡಿರುವ ಶಿಫಾರಸ್ಸಿನ ಮೇಲೆ ಅಲ್ಲ, ಸರ್ಕಾರ ಕಾಲೇಜನ್ನು ಮಂಜೂರು ಮಾಡತಕ್ಕಂಥ. ವಿಷಯವನ್ನು ತಿರುಗಾ ಮುರುಗವಾಗಿ ಹೇಳತಕ್ಕಂತಹ ಕ್ರಮವಾಗಿದೆ. ಈ ರೀತಿ ನಮ್ಮ ಜಿಲ್ಲೆಗೆ ಪ್ರತಿಯೊಂದರಲ್ಲೂ ತಿರುಗ ಮುರುಗ ಮಾಡಬೇಡಿ. ಬತ್ತದ ಕಣಜ ಎಂದು ನಮ್ಮ ಜಿಲ್ಲೆಯನ್ನು ಹೇಳುತ್ತಾರೆ ಹಾಗೂ, ವ್ಯವಸಾಯದಲ್ಲಿ ಪ್ರಾಮುಖ್ಯತೆಯನ್ನು ಪಡೆದಿರತಕ್ಕ ಜಿಲ್ಲೆಯಾಗಿದೆ. ಅಕಸ್ಮಾತ್ ನಿರ್ಣಯ ಆಗಿಲ್ಲ ಎಂದರೆ ಈಗ ತಾವೇ ಒಂದು ನಿರ್ಣಯವನ್ನು ಆ ಬಗ್ಗೆ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಶ್ರೀಮಾನ್ ಶ್ರೀನಿವಾಸ್ ರವರು ಕೊನೆಯ ಭಾಗದ ಪ್ರಶ್ನೆಯಲ್ಲೇ ಉತ್ತರ ಅಡಗಿದೆ. ನಿರ್ಣಯವಾಗಿಲ್ಲ ಎಂದು ಅವರೇ ಒಪ್ಪಿಕೊಂಡಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್ – ಇಲ್ಲ ಇಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ಆದರೂ ಕೂಡ ಈಗ ನವಿಲೆ ಎನ್ನತಕ್ಕಂತಹ...

ಶ್ರೀ ಜಿ. ಪಟೇಲ್.—ಇದೂ ಕೂಡ ಮೊದಲು ಕೇಳಿದಂತಹ ಪ್ರಶ್ನೆಯಂತೆಯೇ ಆಗಿದೆ. ಶ್ರೀಮಾನ್ ಶ್ರೀನಿವಾಸ್ ರವರು ಕೇಳಿದಂತಹ ಪ್ರಶ್ನೆ ವಂಕ್ಯಳಾಗಿದೆಯೇ ? ಎಷ್ಟು ಮಂಕ್ಯಳು. ಮಂಕ್ಯಳು ಆಗಿವೆ ಎಂದು ಉತ್ತರ ಹೇಳಿದರೆ, ಆ ನಾಲ್ಕು ಮಂಕ್ಯಳಿಗೆ ಮುದುವೆ ಆಗಿದೆಯೇ ? ಅಂತ ಹೇಳಿದ ಹಾಗೆ ಆಗುತ್ತದೆ. ಕಾಲೇಜನ್ನು ಪ್ರಾರಂಭ ಮಾಡಬೇಕು ಎಂಬ ತೀರ್ಮಾನವನ್ನು ಮಾಡಿದ ಮೇಲೆ ಸಮಿತಿಯನ್ನು ರಚನೆ ಮಾಡಿದ್ದುದು ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್.—ನಮ್ಮ ಹಿರಿಯ ಸಚಿವರು ಈಗಾಗಲೇ ಉತ್ತರ ಹೇಳಿದ್ದಾರೆ. ಆ ರೀತಿ ತೀರ್ಮಾನ ಮಾಡಿದ್ದಾರೆ. ಅಧ್ಯಯನ ತಂಡವನ್ನು ಕಳುಹಿಸಬೇಕಾದ ಅಗತ್ಯ ಇರಲಿಲ್ಲ. ಶಿವಮೊಗ್ಗದಲ್ಲಿ ಕೃಷಿ ಕಾಲೇಜನ್ನು ಆಗಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ನವಿಲೆ ಎಂಬಲ್ಲಿ ಕೇವಲ ೨೦೦ ಎಕರೆ ಭೂಮಿ ಮಾತ್ರ ಇದೆ. ನಂತರ ಭದ್ರಾವತಿಯಲ್ಲಿ ಸಕ್ಕರೆ ಕಾರ್ಖಾನೆಗೆಂದು ೧೫೦೦ ಎಕರೆ ಭೂಮಿಯನ್ನು ಕೊಡಬೇಕು ಎಂದು ಇದೆ. ಅವರು ೧೫೦೦ ಎಕರೆ ಭೂಮಿಯನ್ನು ಕೊಡದೇ ಇರುವ ಕಾರಣ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಶಿವಮೊಗ್ಗ ಹಾಗೂ ಕುಶಾಲನಗರದಲ್ಲಿ ಕೃಷಿ ಕಾಲೇಜುಗಳನ್ನು ಸ್ಥಾಪನೆ ಮಾಡಬಹುದು ಎಂಬ ಶಿಫಾರಸ್ಸಾಗಿದೆ. ರಾಯಚೂರಿನಲ್ಲಿ ಎಲ್ಲಾ ಸಿದ್ಧತೆಗಳೂ ಆಗಿರುವುದರಿಂದ ತತ್‌ಕ್ಷಣ ಮಾಡಬಹುದು ಎಂಬುದಾಗಿ ಗೊತ್ತಾದ್ದರಿಂದ ಕಳೆದ ವರ್ಷದಿಂದ ರಾಯಚೂರಿನಲ್ಲಿ ಕೃಷಿ ಕಾಲೇಜನ್ನು ಪ್ರಾರಂಭ ಮಾಡಿದ್ದೇವೆ. ಶಿವಮೊಗ್ಗದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆಂದು ತಮ್ಮ ಮೂಲಕ ಅವರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಈ ಒಂದು ಹಿನ್ನಲೆಯಿಂದ ಕೃಷಿ ಮಹಾ ವಿಶ್ವವಿದ್ಯಾನಿಲಯವನ್ನು ಧಾರವಾಡದಲ್ಲಿ ಮಾಡಬೇಕಾಗಿದೆ ಎಂಬುದಾಗಿ ಅನೇಕ ಸಂದರ್ಭಗಳಲ್ಲಿ ಹೇಳಿಯಾಗ, ಅದಕ್ಕೆ ಪೂರಕವಾಗಿ ಶಿವಮೊಗ್ಗದಲ್ಲಿ ಕೃಷಿ ಕಾಲೇಜನ್ನು ಮಾಡತಕ್ಕಂತಹದ್ದು ಅತಿ ಅವಶ್ಯ ಇದ್ದು ಅದನ್ನು ಈಗಲಾದರೂ ವಿಚಾರ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಬೇರೊಂದು ಕಡೆ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೂ, ಶಿವಮೊಗ್ಗದಲ್ಲಿ ಕೃಷಿ ಕಾಲೇಜನ್ನು ಸ್ಥಾಪನೆ ಮಾಡುವುದಕ್ಕೆ ಸಂಬಂಧ ಇಲ್ಲ. ಆದರೆ ಅದನ್ನು ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನನಗೆ ಗೊತ್ತಿದೆ. ಶಿವಮೊಗ್ಗ, ರಾಯಚೂರು ಹಾಗೂ ಕಂಠಾಲ ನಗರ ಈ ಮೂರೂ ಸ್ಥಳಗಳಲ್ಲೂ ಅವಶ್ಯಕತೆ ಇದೆ ಎಂದು ಅಭಿಪ್ರಾಯ ಬಂದದ್ದರಿಂದ ನಾನೇ ಕೃಷಿ ಸಚಿವನಾಗಿದ್ದ ಸಂದರ್ಭದಲ್ಲಿ ಅವುಗಳನ್ನು ತೀರ್ಮಾನ ಮಾಡಿ ಇದೇ ಸದನದಲ್ಲಿ ಹೇಳಿದ್ದೇನೆ. ಅದು ರೆಕಾರ್ಡಿನಲ್ಲಿದೆ. ಸ್ಪಷ್ಟವಾಗಿ ನನಗೆ ನೆನಪು ಇದೆ. ಈ ಮೂರು ಜಾಗಗಳಿಗೂ ಕೂಡ ಕೃಷಿ ಕಾಲೇಜುಗಳನ್ನು ಮಂಜೂರು ಮಾಡಬೇಕೆಂಬ ತೀರ್ಮಾನ ಸರ್ಕಾರದಿಂದ ಆಗಿದೆ ಎನ್ನುತ್ತಕ್ಕಂತಹ ಅಂಶವನ್ನು ಇಲ್ಲಿ ಹೇಳಿಕೆಯ ರೂಪವಾಗಿ ಹೇಳಿದ್ದು ಸ್ಪಷ್ಟವಾಗಿ ನೆನಪು ಇದೆ. ಕೃಷಿ ಕಾಲೇಜನ್ನು ಪ್ರಾರಂಭ ಮಾಡಬೇಕಾದರೆ ಬಹಳಷ್ಟು ಭೂಮಿ ಬೇಕಾಗುತ್ತದೆಂಬುದು ಒಂದು ಪ್ರಶ್ನೆ ಅಲ್ಲಿ ಸಾಕಷ್ಟು ಭೂಮಿ ಇದೆ ಎಂಬುದು ತಮಗೂ ಗೊತ್ತಿದೆ. ಆ ಒಂದು ವಿಚಾರದ ಆಧಾರದ ಮೇಲೆ ಶಿವಮೊಗ್ಗ ಹಾಗೂ ಕಂಠಾಲ ನಗರದಲ್ಲಿ ಕೃಷಿ ಕಾಲೇಜು ಆಗಬೇಕೆಂಬ ಅಭಿಪ್ರಾಯ ಬಂದದ್ದರಿಂದ ಅದ್ಯತೆಯನ್ನು ಕೊಟ್ಟು ಆ ಬಗ್ಗೆ ತೀರ್ಮಾನ ಮಾಡಿದ್ದೇವೆ. ಅದನ್ನು ಈ ಅಧಿವೇಶನದಲ್ಲೂ ಕೂಡ ಪ್ರಕಟ ಮಾಡಿದ್ದೇವೆ. ಅದನ್ನು ಬದಲಾವಣೆ ಮಾಡಿದ್ದರೆ ಹೇಳಿ ಆದರೆ ಈ ವಿಚಾರವನ್ನು ಕ್ಯಾನ್ಸಲ್ ಮಾಡುವ ಪ್ರಶ್ನೆ ಇಲ್ಲಿ ಬರುವುದೇ ಇಲ್ಲ.

ಹಿಂದಿನ ಸರ್ಕಾರದವರು ತೀರ್ಮಾನ ಮಾಡಿದ್ದನ್ನು ಬದಲಾವಣೆ ಮಾಡುತ್ತೀರೋ ? ಇಲ್ಲಾ, ಹಾಗೆಯೇ ಮಂಜೂರು ಮಾಡುತ್ತೀರೋ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದಂತೆ, ನನ್ನಲ್ಲಿರತಕ್ಕಂತಹ ಮಾಹಿತಿಯ ಪ್ರಕಾರ ಕೃಷಿ ಕಾಲೇಜು ಅಲ್ಲಿಗೆ ತೀರ್ಮಾನವಾಗಿಲ್ಲ. ಸದನದಲ್ಲಿ ಯಾವ ಸಂದರ್ಭದಲ್ಲಿ ಅದನ್ನು ಪ್ರಕಟಣೆ ಮಾಡಿದ್ದರೋ ಅದೂ ನನಗೆ ಗೊತ್ತಿಲ್ಲ. ಶ್ರೀ ಜೆ. ವಿ. ಕೆ. ರಾವ್‌ರವರ ಅಧ್ಯಯನ ಸಮಿತಿಯವರು ಶಿವಮೊಗ್ಗ, ಕುಶಾಲನಗರ, ರಾಯಚೂರು ನಗರಗಳಲ್ಲಿ ಅದ್ಯತೆಯ ಮೂಲಕ ಕೃಷಿ ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ತಿಳಿಸಿದ್ದಾರೆ. ಶಿವಮೊಗ್ಗ, ಕುಶಾಲನಗರದಲ್ಲಿ ಪೂರ್ವಭಾವಿ ಸಿದ್ಧತೆ ಆಗಿಲ್ಲ. ಶಿವಮೊಗ್ಗದಲ್ಲಿ ೧, ೮೦೦ ಎಕರೆ ಜಮೀನು ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿದ್ದು ಇದರ ಬಗ್ಗೆ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿದ್ದು, ಅದು ವಿವಾದದಲ್ಲಿದೆ. ಅದು ಇನ್ನೂ ನಮ್ಮ ಸ್ವಾಧೀನಕ್ಕೆ ಬಂದಿಲ್ಲ. ಈಗ ನವಿಲೆಯ ಹತ್ತಿರ ಇನ್ನೂರು ಎಕರೆ, ಭದ್ರಾವತಿ ತಾಲ್ಲೂಕಿನ ಹೊನ್ನಾಳಿಯಲ್ಲಿ ಇನ್ನೂರು ಎಕರೆ ಇದೆ ಇವೆರಡರ ಮಧ್ಯೆ ೧, ೫೦೦ ಎಕರೆ ಜಮೀನು ಕೃಷಿ ಕಾಲೇಜಿಗೆ ಬೇಕಾದ ಜಮೀನು ಸಿಕ್ಕಿದ ಕೂಡಲೇ, ಕಾಲೇಜು ಪ್ರಾರಂಭ ಮಾಡುವುದರ ಬಗ್ಗೆ ಪರಿಶೀಲನೆ ಮಾಡಲಾಗುವುದು.

ಶ್ರೀ ಎಸ್. ಬಂಗಾರಪ್ಪ.—ಹಿಂದಿನ ಸರ್ಕಾರದ ನಿರ್ಧಾರದ ಪ್ರಕಟಣೆ ಮಾಡಲಾಗಿದ್ದು, ನನಗೆ ಜ್ಞಾಪಕದಲ್ಲಿದೆ. ಅದ್ಯತೆ ಕೊಟ್ಟು ಕಾಲೇಜುಗಳನ್ನು ಮಂಜೂರು ಮಾಡುತ್ತೀರಾ ?

ಶ್ರೀ ಎಂ. ಪಿ ಪ್ರಕಾಶ್.—ಅಧ್ಯಕ್ಷರೆ, ಈ ರೀತಿ ಪ್ರಕಟಣೆ ಮಾಡಿರತಕ್ಕಂತಹದ್ದನ್ನು ಬದಲಾವಣೆ ಮಾಡಿಲ್ಲ. ಸಂಪನ್ಮೂಲಗಳನ್ನು ನೋಡಿಕೊಂಡು ಇದರ ಬಗ್ಗೆ ಸೂಕ್ತವಾದ ನಿರ್ಧಾರ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಇದೇ ವರ್ಷ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಸಂಪನ್ಮೂಲಗಳನ್ನು ನಿರ್ಧರಿಸಿ, ಸರ್ಕಾರವು ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಜಿ. ಬಸವನಗೌಡ.—ಅನೇಕ ವರ್ಷಗಳಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು, ಕೃಷಿ ಕಾಲೇಜು, ಫಿಶರೀಸ್ ಕಾಲೇಜು ಕೊಡಬೇಕು, ಸಹ್ಯಾದ್ರಿ ವಿಶ್ವವಿದ್ಯಾನಿಲಯ ಕೊಡಬೇಕೆಂದು ಒತ್ತಾಯಿಸಿದ್ದೇವೆ. ಮುಂದಿನ ವರ್ಷವಾದರೂ ಕೃಷಿ ಕಾಲೇಜನ್ನು ಕೊಡುವ ಭರವಸೆ ಕೊಡುತ್ತೀರಾ ?

(ಉತ್ತರ ಇಲ್ಲ.)

ಒಬ್ಬ ಮಾನ್ಯ ಸದಸ್ಯರು.—ಕೊಡಗಿನಲ್ಲಿ ಸ್ಥಾಪನೆ ಮಾಡುವ ಕಾಲೇಜಿನ ಬಗ್ಗೆ ಪೂರ್ವಭಾವಿ ಸಿದ್ಧತೆಯೆಲ್ಲಾ ಆಗಿದ್ದು, ಇನ್ನೂರು ಎಕರೆ ಜಮೀನನ್ನು ಕೂಡಾ ಕೊಟ್ಟಿದ್ದಾರೆ. ಹಿಂದೆ ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಗುಂಡೂರಾಯರು ಈ ಬಗ್ಗೆ ಘೋಷಣೆ ಮಾಡಿದ್ದರು. ಅಲ್ಲಿಗೆ ಕೃಷಿ ಕಾಲೇಜನ್ನು ಕೊಡಬೇಕು. ಕೊಡಗಿನಲ್ಲಿ ಬರತಕ್ಕಂತಹ ಕೃಷಿಯೇ ಬೇರೆ. ಕಾಫಿ, ಏಲಕ್ಕಿ, ಮೆಣಸು ಬೆಳೆಯುತ್ತಾರೆ. ಈ ವಿಚಾರದಲ್ಲಿ ಸರ್ಕಾರದವರು ಕ್ರಮ ಕೈಗೊಳ್ಳುತ್ತಾರೆಯೇ ?

ಶ್ರೀ ಎಂ. ಪಿ. ಪ್ರಕಾಶ್.—ಅಧ್ಯಕ್ಷರೆ, ಈಗಾಗಲೇ ನಾನು ಪ್ರಸ್ತಾಪ ಮಾಡಿದಂತೆ ಕೇವಲ ಇನ್ನೂರು ಎಕರೆ ಜಮೀನಿನಲ್ಲಿ ಕೃಷಿ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಆಗುವುದಿಲ್ಲ. ಆದರೂ ಕೂಡ, ಈ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆ.

ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ

೫೧೪ ಶ್ರೀ ಪಟಮಕ್ಕಿ ರತ್ನಾಕರ (ತೀರ್ಥಹಳ್ಳಿ) ಈ ಕೆಳ ಕಂಡ ಪ್ರಶ್ನೆಗಳಿಗೆ ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ? ಈ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು ? ಕೊರತೆ ಇರುವ ಉಪಾಧ್ಯಾಯರ ಸಂಖ್ಯೆ ಎಷ್ಟು ? ಹಾಗೂ ಅದನ್ನು ಯಾವಾಗ ಭರ್ತಿ ಮಾಡಲಾಗುವುದು ?

ಆ) ಮೇಲ್ಕಂಡ ಶಾಲೆಗಳ ಪೈಕಿ ಸ್ವಂತ ಕಟ್ಟಡಗಳನ್ನು ಹೊಂದಿರುವ ಶಾಲೆಗಳ ಸಂಖ್ಯೆ ಎಷ್ಟು ?

ಶ್ರೀ ಎಚ್. ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ಪ್ರಾಥಮಿಕ ಶಾಲೆಗಳ ಸಂಖ್ಯೆ. ೨೩೮. ಈ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರ ಸಂಖ್ಯೆ. ೪೫೧. ಕೊರತೆ ಇರುವ ಶಿಕ್ಷಕರ ಸಂಖ್ಯೆ. ೧೬೮. ಈ ಕೊರತೆ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರವೇ ಕ್ರಮ ಕೈಗೊಳ್ಳಲಾಗುತ್ತದೆ.

ಆ) ೨೧೪ ಶಾಲೆಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ.

ಶ್ರೀ ಪಿ. ರತ್ನಾಕರ್.—ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ತೀರ್ಥಹಳ್ಳಿಯಲ್ಲಿ ಪ್ರಾಥಮಿಕ ಶಾಲೆಗಳ ಸಂಖ್ಯೆ ೨೩೮. ಶಿಕ್ಷಕರ ಸಂಖ್ಯೆ ೪೫೧. ಒಂದು ಶಾಲೆಗೆ ಒಂದು, ಒಂದೂವರೆ ಶಿಕ್ಷಕರೂ ಕೂಡ ಬರುವುದಿಲ್ಲ. ಕೆಲವು ಶಾಲೆಗಳಲ್ಲಿ ಒಂದು ಶಾಲೆಗೆ ಒಬ್ಬ ಉಪಾಧ್ಯಾಯರು ಇರುತ್ತಾರೆ. ಆ ಉಪಾಧ್ಯಾಯರು ೮ ದಿನ ರಜೆ ಹಾಕಿ ಹೋದರೆ, ಶಾಲೆಯೂ ೮ ದಿನ ಮುಚ್ಚುತ್ತದೆ. ಈ ಕೊರತೆಯನ್ನು ನಿವಾರಿಸಿ, ಗ್ರಾಮಾಂತರ ಪ್ರದೇಶಗಳ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯನ್ನು ಸರಿಯಾಗಿ ಮಾಡದೇ ಹೋದರೆ ನಮ್ಮ ದೇಶದ ಭವಿಷ್ಯದಲ್ಲಿ ಆಶಾಭಾವನೆಯನ್ನು ಕಾಣುವುದಾದರೂ ಹೇಗೆ ? ಒಟ್ಟು ೨೩೮ ಶಾಲೆಗಳ ಪೈಕಿ ೨೧೪ ಶಾಲೆಗಳಿಗೆ ಸ್ವಂತ ಕಟ್ಟಡಗಳಿವೆ. ೨೪–೨೫ ಶಾಲೆಗಳಿಗೆ ಸ್ವಂತ ಕಟ್ಟಡಗಳಿಲ್ಲ. ಕಟ್ಟಡಗಳಿಲ್ಲದೇ ಇರುವ ಶಾಲೆಗಳು ಹೇಗೆ ನಡೆಯುತ್ತವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಉಪಾಧ್ಯಾಯರು ಪಾಠ ಮಾಡುತ್ತಾರೋ, ಇಲ್ಲವೇ ? ಇದರ ಬಗ್ಗೆ ಸಚಿವರ ಉತ್ತರವನ್ನು ಬಯಸುತ್ತೇನೆ.

ಶ್ರೀ ಎಚ್. ಜಿ. ಗೋವಿಂದೇಗೌಡ. ಸ್ವಾಮಿ, ನನ್ನ ಸ್ನೇಹಿತರು ಹೇಳಿದ ಹಾಗೆ, ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತಿರತಕ್ಕಂತಹ ಶಾಲೆಗಳಲ್ಲಿ ಉಪಾಧ್ಯಾಯರುಗಳ ಕೊರತೆ ಇದೆ. ಈ ಬಗ್ಗೆ ನನಗೂ ಅನುಭವ ಇದೆ ಏಕೆಂದರೆ, ನಾನೂ ಮಲೆನಾಡಿನಲ್ಲಿ ಹುಟ್ಟಿ ಬೆಳೆದವನು. ನನ್ನ ಕ್ಷೇತ್ರದ ಪಕ್ಕದಲ್ಲಿಯೇ ತೀರ್ಥಹಳ್ಳಿ ಇದೆ. ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ತೊಂದರೆಯಾಗುತ್ತಿರುವುದರ ಬಗ್ಗೆ ಎರಡು ಮಾತಿಲ್ಲ. ಕರ್ನಾಟಕದ ಯಾವುದೇ ಮೂಲೆಗೆ ಹೋದರೂ, ಶಿಕ್ಷಕರ ಕೊರತೆಯಿದೆ. ಇತ್ತೀಚೆಗೆ ೧೮ ಸಾವಿರ ಶಿಕ್ಷಕರನ್ನು ನೇಮಕ ಮಾಡಿದ್ದೇವೆ. ಈಗಾಗಲೇ ಅವರು ಕೆಲಸಕ್ಕೆ ಹೋಗಿದ್ದಾರೆ. ೨೩೮ ಶಾಲೆಗಳಲ್ಲಿ ೪೫೦ ಉಪಾಧ್ಯಾಯರುಗಳಿರುವರೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುತ್ತಾರೆ. ಹಳ್ಳಿಗಳಲ್ಲಿ ಏಕ ಉಪಾಧ್ಯಾಯರು ಇರುವ ಶಾಲೆಗಳೂ ಜಾಸ್ತಿಯಿವೆ. ೪೫–೫೦ ಮಕ್ಕಳಿಗೆ ಒಬ್ಬ